

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮನಸ್ಸು ಮತ್ತು ಬುದ್ಧಿಯ ಇತಿಮಿತಿಗಳು

ಇಲ್ಲಿಗೆ ಸುಮಾರು 25 ವರ್ಷಗಳ ಹಿಂದೆ ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳ ಪ್ರಮುಖ ನಗರಗಳಲ್ಲಿ ಭಾರತೀಯ ಧರ್ಮ ಮತ್ತು ಸಂಸ್ಕೃತಿ ಕುರಿತು ಆರು ವಾರಗಳ ಕಾಲ ವಿಶೇಷ ಉಪನ್ಯಾಸ ನೀಡಲು ಪ್ಯಾರಿಸ್‌ನಲ್ಲಿರುವ ಇಂಡೋ-ಫ್ರೆಂಚ್ ಸಾಂಸ್ಕೃತಿಕ ಕೇಂದ್ರದಿಂದ ಆಹ್ವಾನ ಬಂದಿತ್ತು. ಅದರ ನಿರ್ದೇಶಕರಾಗಿದ್ದ ಕರ್ನಾಟಕದವರೇ ಆದ ಡಾ. ಮಹೇಶ್ ಘಟ್ರಡ್ಯಾಲ್‌ರವರು ಪ್ಯಾರಿಸ್ ಮಹಾನಗರದಲ್ಲಿ ನಮ್ಮ ವಸತಿಗಾಗಿ ಏಳು ಅಂತಸ್ತಿನ ಕಟ್ಟಡದಲ್ಲಿ ಒಂದು ಫ್ಲಾಟ್ ವ್ಯವಸ್ಥೆ ಮಾಡಿದ್ದರು. ಮೊನ್ನೆ ಹಳೆಯ ಕಾಗದ ಪತ್ರಗಳನ್ನು ಕೆದಕಿ ನೋಡಿದಾಗ ಅಲ್ಲಿಂದ ಮಠಕ್ಕೆ ದಿನಾಂಕ 23.5.1985 ರಂದು ಬರೆದ ಸುದೀರ್ಘ ಪತ್ರದ ಆಯ್ದಭಾಗ ಕುತೂಹಲಕಾರಿಯಾಗಿದೆ:

"ಈಗ ರಾತ್ರಿ 10 ಘಂ. ಈ ಪತ್ರವನ್ನು ಇನ್ನೂ ಸಂಜೆಯ ಸೂರ್ಯನ ಬೆಳಕಿನಲ್ಲಿಯೇ ಬರೆಯುತ್ತಿದ್ದೇವೆಂದರೆ ನಿಮಗೆ ಆಶ್ಚರ್ಯವಾಗದೇ ಇರದು. ಈಗ ಇಲ್ಲಿ ಹಗಲು ಜಾಸ್ತಿ. ರಾತ್ರಿ 10.30 ಘಂಟೆಗೆ ಕತ್ತಲಾಗುತ್ತದೆ. ಬೆಳಗ್ಗೆ 6 ಘಂಟೆಯೊಳಗೆ ಸೂರ್ಯೋದಯವಾಗುತ್ತದೆ. ನಾವು ವಾಸವಾಗಿರುವುದು ಏಳು ಅಂತಸ್ತಿನ ಕಟ್ಟಡದ ಒಂದು ಫ್ಲಾಟ್‌ನಲ್ಲಿ. ಎರಡು ರೂಮುಗಳಿವೆ. ಅಡಿಗೆ ಮನೆ, ಬಾತ್‌ರೂಂ ಪ್ರತ್ಯೇಕ ಇವೆ. ನಾವಿರುವುದು ಐದನೆಯ ಮಹಡಿಯಲ್ಲಿ. ನಿನ್ನೆ ಒಂದು ಘಟನೆ ನಡೆಯಿತು.

ಈ ಕಟ್ಟಡದಲ್ಲಿರುವ ಲಿಫ್ಟ್ ಬಹಳ ಚಿಕ್ಕದು. ಮೂರು ಜನರ ಮೇಲೆ ಹಿಡಿಸುವುದಿಲ್ಲ. ನಾವು ಇದ್ದವರು ನಾಲ್ಕು ಜನ. ಹೇಗೋ ಸುಧಾರಿಸಿಕೊಂಡು ಹೋಗೋಣವೆಂದು ಲಿಫ್ಟ್‌ನೊಳಗೆ ಮೈಮುದುಡಿಕೊಂಡು ನಿಂತೆವು. ಐದನೆಯ ಮಹಡಿಯ ಗುಂಡಿಯನ್ನೊತ್ತಿದ್ದೇ ತಡ 'ಛಕ್' ಎಂದು ಮೇಲಕ್ಕೆ ಹೊರಟ ನಮ್ಮ ಲಿಫ್ಟ್ ಇದ್ದಕ್ಕಿದ್ದಂತೆಯೇ ಎರಡು ಮಹಡಿಗಳ ಮಧ್ಯೆ ಧರಣಿ ಸತ್ಯಾಗ್ರಹ ಹೂಡಿಬಿಟ್ಟಿತು. ಯಾವ ಗುಂಡಿಯನ್ನು ಒತ್ತಿದರೂ ಮೇಲಕ್ಕೂ ಇಲ್ಲ, ಕೆಳಕ್ಕೂ ಇಲ್ಲ; ಒಂದು ರೀತಿಯ ತ್ರಿಶಂಕುಸ್ಥಿತಿಯಾಯಿತು. ಪಾಪ ಅದರದು ನಿಜಕ್ಕೂ ಸತ್ಯಾಗ್ರಹವೇ! ಸುತ್ತಲೂ ಕಣ್ಣರಳಿಸಿ ನೋಡಿದಾಗ ಒಂದೆಡೆ ಫ್ರೆಂಚ್ ಭಾಷೆಯಲ್ಲಿ ಬರೆದಿತ್ತು: 250 ಕೆ.ಜಿ. ಅಥವಾ 3 ಜನರಿಗಿಂತ ಹೆಚ್ಚು ಹೊರುವುದಿಲ್ಲ! ಒಬ್ಬರ ತೂಕವನ್ನು ಒಬ್ಬರು ಕೇಳಿ ಕೂಡ ತೊಡಗಿದೆವು. ಸರಾಸರಿ 60 ಕೆ.ಜಿ. ಯಂತೆ ಹಿಡಿದರೂ ಒಟ್ಟು 240 ಕೆ.ಜಿ. ಯಾಗುತ್ತದೆ; ಇನ್ನೂ 10 ಕೆ.ಜಿ. ಕಡಿಮೆ ಇದ್ದರೂ ಹೀಗೆ ನಿಲ್ಲಬಹುದೇ? ಇದು ಸತ್ಯಾಗ್ರಹವಲ್ಲ, ದುರಾಗ್ರಹವೆನಿಸಿತು. ಆದರೆ ಯಾರಿಗೂ ಅವರವರ ಇತ್ತೀಚಿನ ತೂಕ ಸರಿಯಾಗಿ ಗೊತ್ತಿರಲಿಲ್ಲ. ಮನುಷ್ಯರು ತಪ್ಪು ಮಾಡಿದರೂ ಇಲ್ಲಿಯ ಯಂತ್ರಗಳು ತಪ್ಪು ಮಾಡುವುದಿಲ್ಲ. ಸ್ವಲ್ಪ ಹೊತ್ತು ಯೋಚಿಸಿದ ಮೇಲೆ ಕೈಯಲ್ಲಿದ್ದ ಸಾಮಗ್ರಿಗಳ ತೂಕವನ್ನು ಕಡೆಗಣಿಸಿದ್ದು ನೆನಪಾಯಿತು. 'ಸತ್ಯಮೇವ ಜಯತೇ' ಎಂದು ಲಿಫ್ಟ್ ನಮ್ಮನ್ನು ನೋಡಿ ಗಹಗಹಿಸಿ ನಕ್ಕಂತಾಯಿತು! ನಿಯಮೋಲ್ಲಂಘನೆ ಮಾಡಿದ್ದಕ್ಕಾಗಿ ಸದ್ದುಗದ್ದಲವಿಲ್ಲದೆ ನಮ್ಮನ್ನು ಹೆಡೆಮುರಿ ಕಟ್ಟಿ ಬಂಧಿಸಿ ಬಿಟ್ಟಿತ್ತು. ನಾವು ಮಾಡಿದ ನಿರ್ಲಕ್ಷ್ಯಕ್ಕಾಗಿ ನಮ್ಮನ್ನು ಕೆಳಕ್ಕೆ ತಳ್ಳಿ ಹಾಕದೆ ಹಾಗೆಯೇ ಅಂತರದಲ್ಲಿಯೇ ಹೊತ್ತುಕೊಂಡು ನಿಂತದ್ದು ನಮ್ಮ ಪುಣ್ಯ ಎನಿಸಿತು. ಎರಡು ಮಹಡಿಗಳ ಮಧ್ಯೆಯಾಗಿದ್ದರಿಂದ ಬಾಗಿಲು ತೆರೆದು ಹೊರಗೆ ಬರುವಂತಿರಲಿಲ್ಲ. ಕೂಡಲೇ ಅಪಾಯದ ಕರೆಗಂಟೆಯನ್ನು ಒತ್ತಿದೆವು. ಯಾರೂ ಬಂದ ಸುಳಿವು ಸಿಗಲಿಲ್ಲ. ಹೀಗೆಯೇ ಬಹಳ ಹೊತ್ತಿನವರೆಗೆ ಯಾರೂ ಬರದೇ ಇದ್ದರೆ ಹೇಗೆ? ಹೊರಗಿನಿಂದ ಗಾಳಿಯೂ ಸಹ ಬಾರದೆ ಉಸಿರುಕಟ್ಟಿದಂತಾದರೆ ಗತಿಯೇನು ಎಂಬ ಯೋಚನೆ ಬಂದು ಎಲ್ಲರಿಗೂ ದಿಗಿಲುಂಟಾಯಿತು. ಮೇಲೆ ನೋಡಲು ಕಿರುಬೆರಳಿನಷ್ಟು ಕಿರಿದಾದ ಸಂದು ಲಿಫ್ಟಿನ ಅಗಲಕ್ಕೂ ಇದ್ದು ಸಮಾಧಾನವಾಯಿತು. ಮೇಲಧಿಕಾರಿಗಳ ಕೋಣೆಯನ್ನು ಘೇರಾವ್ ಮಾಡಿದ ಕಾರ್ಮಿಕರು, ಬೇಸ್ತು ಬಿದ್ದು ಬೆಮರಿದ ಅಧಿಕಾರಿಗೆ ಚಹಾಪಾನೀಯವನ್ನು ತಂದು ಕೊಡುವಂತೆ ಆ ಸಂದಿನಲ್ಲಿ ನಮಗೆ ಉಸಿರಾಡುವಷ್ಟು ಗಾಳಿ ಬರುತ್ತಿತ್ತು. ಪಂಜರದ ಗಿಳಿಗಳಂತೆ ಆದ ನಮಗೆ ಅಪಾಯದ ಕರೆಗಂಟೆಯನ್ನು ಮತ್ತೆ ಮತ್ತೆ ಒತ್ತದೆ ಬೇರೆ ವಿಧಿಯಿರಲಿಲ್ಲ. ಅದೇ ಕಟ್ಟಡದಲ್ಲಿ ವಾಸವಾಗಿದ್ದ ಮಧ್ಯ ವಯಸ್ಸಿನ ಮಹಿಳೆಯೊಬ್ಬಳು ಗಂಟೆಯ ಶಬ್ದವನ್ನು ಗಮನಿಸಿ ನಮ್ಮ ರಕ್ಷಣೆಗೆ ಧಾವಿಸಿದಳು. ನಾವು ಯಾವ ಅಂತಸ್ತಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆಂಬುದನ್ನು ಕೂಗಿ ತಿಳಿದುಕೊಂಡು ಕೂಡಲೇ ತನ್ನ ಫ್ಲಾಟಿಗೆ ಹೋಗಿ ರಕ್ಷಣಾ ಪಡೆಯವರಿಗೆ ಫೋನ್ ಮಾಡಿದಳು. ರಕ್ಷಣಾದಳದವರು ಬರುವುದು ಎಷ್ಟು ಹೊತ್ತಾಗುತ್ತದೆಯೋ ಏನೋ ಎಂದು ಮಾತನಾಡುತ್ತಿದ್ದಂತೆಯೇ ಬಂದೇ ಬಿಟ್ಟರು. ನಮ್ಮನ್ನು ಲಿಫ್ಟಿನಿಂದ ಪಾರು ಮಾಡಲು ಬೇಕಾದ ಉಪಕರಣಗಳಿಂದ ಸಜ್ಜಾಗಿ ಬಂದಿದ್ದರು. ಹೇಗೆ ಪಾರು ಮಾಡುತ್ತಾರೆಂಬುದು ನಮಗೆ ಕುತೂಹಲಕಾರಿಯಾಗಿತ್ತು. ಧ್ವನಿಯ ಗುರುತಿನಿಂದ ಮೂರ್‍ನಾಲ್ಕು ಜನರು ಇದ್ದಂತೆ ತೋರಿತು. ಒಬ್ಬನು ತನ್ನ ಕೈಯಲ್ಲಿದ್ದ ವೈರ್‌ಲೆಸ್‌ನಿಂದ ಆ ಲಿಫ್ಟ್‌ನ ಕಂಪನಿಯವರಿಗೆ ಮಾತನಾಡಿದನು. ಕಂಪನಿಯವರು ಅದು ಯಾವ ಮಾಡೆಲ್ ಲಿಫ್ಟ್ ಎಂದು ಕೇಳಿ ಅಪಾಯದ ಸಂದರ್ಭದಲ್ಲಿ ಏನು ಮಾಡಬೇಕೆಂದು ಕಂಪ್ಯೂಟರ್ ಗುಂಡಿಯನ್ನೊತ್ತಿ ತಿಳಿದುಕೊಂಡು ಅದರ ಸುರಕ್ಷತಾ ಕ್ರಮದ ಬಗ್ಗೆ ಸೂಚನೆಯನ್ನು ನೀಡಿದುದು ಅಸ್ಪಷ್ಟವಾಗಿ ಕೇಳಿಸಿತು. ಒಬ್ಬಿಬ್ಬರು ಮೆಟ್ಟಿಲುಗಳನ್ನು ಹತ್ತಿ ಮೇಲಕ್ಕೆ ಹೋದರು. ಅವರು ಲಿಫ್ಟನ್ನು ಹಿಡಿದು ಜಗ್ಗುವರೇ ಎಂದು ಊಹಿಸಿಕೊಳ್ಳುತ್ತಿದ್ದಂತೆ ನಮ್ಮ ಮುಂದಿನ ಬಾಗಿಲು ತೆರೆಯಿತು. ರಕ್ಷಣಾದಳದ ಪೇದೆಯೊಬ್ಬನು ತಾನು ತಂದಿದ್ದ ಕೀ ಗೊಂಚಲಿನಿಂದ ಸರಿಯಾದ ಬೀಗದ ಕೈಯನ್ನು ಹುಡುಕಿ ಎಷ್ಟು ಬೇಗ ತೆಗೆದನೆಂದರೆ ಯಾರೂ ತಮ್ಮ ಸ್ವಂತ ಮನೆಯ ಬೀಗವನ್ನೂ ಅಷ್ಟು ಬೇಗ ತೆಗೆಯಲಾರರು. ನಮ್ಮ ಲಿಫ್ಟ್ ಎರಡು ಮಹಡಿಗಳ ಮಧ್ಯೆ ನಿಂತಿದ್ದರಿಂದ ನಮಗೆ ಬಾಗಿಲು ತೆರೆದದ್ದು ಅರ್ಧಭಾಗ ಮಾತ್ರ ಕಂಡು ಬೋನಿನ

ಕವಾಟವನ್ನು ತೆರೆದಂತಾಗಿತ್ತು. ಬಾಗಿಲು ತೆರೆಯುತ್ತಿದ್ದಂತೆಯೇ ಇಳಿಯಬೇಡಿರೆಂದು ಪೇದೆಯು ಎಚ್ಚರಿಸಿದ. ಮಹಡಿಯನ್ನು ಹತ್ತಿ ಹೋದ ಆತನ ಸಹೋದ್ಯೋಗಿ ಲಿಫ್ಟಿನ ತುದಿಭಾಗದಲ್ಲಿ ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ ಅಲ್ಲಿಂದ ತನ್ನ ಕೈಯಲ್ಲಿದ್ದ ವೈರ್‌ಲೆಸ್‌ನಿಂದ ಸುದ್ದಿಯನ್ನು ಕೊಟ್ಟ ಮೇಲೆ ನಮಗೆ ಇಳಿಯಲು ಅನುಮತಿ ದೊರೆಯಿತು.

ನಮ್ಮ ಉಪೇಕ್ಷೆಯ ಕಾರಣದಿಂದ ಇಷ್ಟೆಲ್ಲಾ ತೊಂದರೆಯನ್ನು ತೆಗೆದುಕೊಳ್ಳಬೇಕಾದ ರಕ್ಷಣಾದಳದ ಪೇದೆಗಳ ಮುಖದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಕೃತಕೃತ್ಯತಾಭಾವ ಇತ್ತೇ ಹೊರತು ಹುಬ್ಬುಗಂಟಿಕ್ಕಿರಲಿಲ್ಲ. ನಮ್ಮಿಂದ ಅವರು ಯಾವ 'ಮರ್ಯಾದೆ'ಯನ್ನೂ ನಿರೀಕ್ಷಿಸಿರಲಿಲ್ಲ. ಒಬ್ಬೊಬ್ಬರೇ ಲಿಫ್ಟ್‌ನಿಂದ ಇಳಿಯುತ್ತಾ ರಕ್ಷಣಾದಳದವರಿಗೂ, ಅವರನ್ನು ಕರೆಸಿದ ಮಹಿಳೆಗೂ "ಮರ್ಸಿ ಮಿಸ್ಯೂ, ಮರ್ಸಿ ಬಕು ಮೆಡಂ" ಎಂದು ಕೃತಜ್ಞತೆಯನ್ನು ಸೂಚಿಸಿದೆವು. ಗೂಡಿನಿಂದ ಹಾರಿಬಿಟ್ಟ ಪಾರಿವಾಳಗಳು ಗರಿಗೆದರಿದಂತಾಗಿತ್ತು. ಲಿಫ್ಟ್‌ನಿಂದ ಪಾರು ಮಾಡುವುದು ರಕ್ಷಣಾದಳದವರ ಕರ್ತವ್ಯವಾಗಿತ್ತೇ ಹೊರತು ಅದು ಪುನಃ ಚಲಿಸುವಂತೆ ರಿಪೇರಿ ಮಾಡುವುದು ಅವರ ಕೆಲಸವಾಗಿರಲಿಲ್ಲ. ಅದು ಸಂಜೆಯಾಗಿದ್ದರಿಂದ ಮಾರನೆಯ ಬೆಳಗ್ಗೆಯವರೆಗೂ ಅದನ್ನು ರಿಪೇರಿ ಮಾಡುವ ಕಂಪನಿಯವರು ಬರುವುದಿಲ್ಲವೆಂದು ತಿಳಿದು ತುಂಬಾ ಖೇದವೆನಿಸಿದು. ಅಲ್ಲಿಯವರೆಗೂ ನಮ್ಮ ಕಾರಣದಿಂದ ಆ ಕಟ್ಟಡದಲ್ಲಿರುವವರೆಲ್ಲರೂ ವಿಶೇಷವಾಗಿ ವೃದ್ಧರು ಮತ್ತು ಮಕ್ಕಳು ಏಳು ಮಹಡಿಯ ಮೆಟ್ಟಿಲುಗಳನ್ನು ಕಾಲ್ನಡಿಗೆಯಲ್ಲಿಯೇ ಹತ್ತಿಳಿಯಬೇಕಾದ ಅನಿವಾರ್ಯತೆಯನ್ನು ನೆನೆಸಿಕೊಂಡು ಭಾರವಾದ ಕಾಲುಗಳಿಂದ ಮಹಡಿಯ ಒಂದೊಂದೇ ಮೆಟ್ಟಿಲನ್ನು ಏರತೊಡಗಿದೆವು.

ನಾವು ವಾಸವಾಗಿದ್ದ ಐದನೆಯ ಮಹಡಿಯ ಕೊನೆಯ ಮೆಟ್ಟಿಲು ಸಮೀಪಿಸುತ್ತಿದ್ದಂತೆ ಒಂದು ಕಥೆ ಜ್ಞಾಪಕಕ್ಕೆ ಬಂದಿತು. ದಾವಣಗೆರೆಯ ಡಿ.ಆರ್.ಎಂ. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಬಿ.ಜಿ. ನಾಗರಾಜ್‌ರವರು ಯಾವುದೋ ಸಮಾರಂಭದಲ್ಲಿ ಹೇಳಿದ ನೆನಪು. ವ್ಯಂಗೋಕ್ತಿ, ಹಾಸ್ಯ ಚಟಾಕಿಗಳಿಂದ ಎಲ್ಲರನ್ನೂ ನಕ್ಕು ನಗಿಸಿ ಆಲೋಚಿಸುವಂತೆ ಮಾಡಿ ತಾವು ಮಾತ್ರ ನಗದೆ ಗಂಭೀರವಾಗಿ ವಿನೋದದಲ್ಲಿ ವಿಚಾರವನ್ನು ಬೆರೆಸಿ ಮಾತನಾಡುವ ಕಲೆ ಅವರದು. ಅವರು ಹೇಳಿದ ಆ ರೋಚಕ ಕಥಾನಕ ಹೀಗಿದೆ:

ಆಂಗ್ಲ ಭಾಷೆಯ ಪ್ರಸಿದ್ಧ ವಿದ್ವಾಂಸರಿಬ್ಬರು ಯಾವುದೋ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಹೋಗಿದ್ದರು. ಅವರು ಉಳಿದುಕೊಂಡಿದ್ದ ಹೋಟೆಲ್ ಕೊಠಡಿ ಮೂವತ್ತನೆಯ ಮಹಡಿಯ ಮೇಲಿತ್ತು. ಸಮ್ಮೇಳನವನ್ನು ಮುಗಿಸಿಕೊಂಡು ಹೋಟೆಲ್‌ಗೆ ಹಿಂದಿರುಗಿದಾಗ ಲಿಫ್ಟ್ ಕೆಟ್ಟುಹೋಗಿತ್ತು. ಅನಿವಾರ್ಯವಾಗಿ ಒಂದೊಂದೇ ಮೆಟ್ಟಲನ್ನು ನಿಧಾನವಾಗಿ ಹತ್ತಲು ತೊಡಗಿದರು. ಹತ್ತುವ ಶ್ರಮವನ್ನು ಮರೆಯಲು ಷೇಕ್ಸ್‌ಪಿಯರ್‌ನ ದುಃಖಾಂತ ನಾಟಕಗಳ (Tragedies) ಬಗ್ಗೆ ಸಂಭಾಷಿಸತೊಡಗಿದರು. ಒಂದೊಂದೇ ಮೆಟ್ಟಿಲನ್ನು ಮೇಲೇರಿದಂತೆ ಸಂಭಾಷಣೆಯು ಕಾವೇರುತ್ತಿತ್ತು. ಏದುಸಿರುಬಿಡುತ್ತಾ ಮೂವತ್ತನೆಯ ಮಹಡಿಯ ಕೊನೆಯ ಮೆಟ್ಟಿಲನ್ನು ಹತ್ತಿ ವಿಜಯೋತ್ಸಾಹದಿಂದ ಕೊಠಡಿಯ ಬಾಗಿಲನ್ನು ತೆರೆಯಲು ವಿದ್ವಾಂಸರೊಬ್ಬರು ಮುಂದಾದರು. ಬೀಗದಕೈಗಾಗಿ ತಮ್ಮ ಜೇಬಿನೊಳಗೆ ಕೈಯಿಟ್ಟಾಗ ದಿಗಿಲುಗೊಂಡು ನುಡಿದರಂತೆ: "My dear friend! the greatest tragedy of ours is that we have forgotten the keys of our room downstairs at the reception counter!" ರೂಮಿನ ಬೀಗದ ಕೈಯನ್ನು ಕೆಳಗಿನ ರಿಸೆಪ್ಷನ್ ಕೌಂಟರ್‌ನಲ್ಲಿಯೇ ಮರೆತು ಬಂದಿದ್ದ ಆ ವಿದ್ವಾಂಸರಿಗೆ ಮೂವತ್ತು ಮಹಡಿಗಳ ಮೇಲಿಂದ ಒಮ್ಮೆಲೇ ಕೆಳಕ್ಕೆ ಉರುಳಿ ಬಿದ್ದಂತಾಗಿತ್ತು!

ಈ ಕಥೆಯನ್ನು ನೆನೆಸಿಕೊಂಡು ದುಗುಡದಿಂದಲೇ ಸಾವಧಾನವಾಗಿ ಜೇಬಿನೊಳಗೆ ಕೈಯಿಟ್ಟಾಗ ಜೇಬಿನ ಮೂಲೆಯಲ್ಲಿದ್ದ ಬೀಗದ ಕೈ ನಮ್ಮ ಕೈಬೆರಳಿಗೆ ತಗುಲಿ ವಿದ್ಯುತ್ ಸಂಚಾರವಾದಂತಾಯಿತು. ಮಕ್ಕಳು ಉಸಿರು ಬಿಗಿಹಿಡಿದು ಬಣ್ಣದ ಚಿಟ್ಟೆಯನ್ನು ಹಿಡಿದಂತಾಗಿತ್ತು! ನಮ್ಮನ್ನು ನೋಡಲು ಬಂದ ಡಾ॥ ಮಹೇಶ್‌ರವರು ಇದೆಲ್ಲವನ್ನೂ ಕೇಳಿ ನಮ್ಮೊಂದಿಗೆ ಲಿಫ್ಟ್‌ನಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಅವರ ಕಾರ್ಯದರ್ಶಿಯನ್ನು ತರಾಟೆಗೆ ತೆಗೆದುಕೊಂಡರು. ಬಹಳ ವರ್ಷಗಳ ಹಿಂದೆ ಬೊಂಬಾಯಿಯಲ್ಲಿ ನಡೆದ ದುರ್ಘಟನೆಯೊಂದನ್ನು ನಿರೂಪಿಸಿದರು: ಮೋಡಗಳನ್ನು ಭೇದಿಸಿ ಆಕಾಶದೆತ್ತರಕ್ಕೆ ಕೈಚಾಚಿ ನಿಂತ ಗಗನಚುಂಬಿ ಸೌಧಗಳು ಬೊಂಬಾಯಿಗೆ ಹೊಸದೇನಲ್ಲ. ಹತ್ತಿಪ್ಪತ್ತು ಮಹಡಿಗಳ ಮೇಲೆ ವಾಸವಾಗಿದ್ದ ಅವರ ಸ್ನೇಹಿತರ ಧರ್ಮಪತ್ನಿಯು ಎಂದಿನಂತೆ ಇಳಿಯಲು ಲಿಫ್ಟ್ ಬಳಿ ಹೋದಳು. ಯಾವುದೋ ಆಲೋಚನೆಯಲ್ಲಿ ಇದ್ದ ಅವಳಿಗೆ ಲಿಫ್ಟ್ ಕೆಟ್ಟುಹೋಗಿರುವುದು ಗಮನಕ್ಕೆ ಬರಲಿಲ್ಲ. ಅಭ್ಯಾಸ ಬಲದಿಂದ ಗುಂಡಿ ಒತ್ತಿದಳು. ಸಾಮಾನ್ಯವಾಗಿ ಕೆಟ್ಟು ಹೋದ ಲಿಫ್ಟಿನ ಬಾಗಿಲು ತೆರೆಯುವುದಿಲ್ಲ. ಆದರೆ ದುರ್ದೈವವಶಾತ್ ತೆರೆಯಿತು. ಆ ಮಹಿಳೆ ತಾನು ನಿಂತ ಮಹಡಿಯಲ್ಲಿಯೇ ಲಿಫ್ಟ್ ನಿಂತಿದೆಯೆಂದು ಭಾವಿಸಿ ಸಹಜವಾಗಿ ಒಳಗೆ ಕಾಲಿಟ್ಟಳು. ಆದರೆ ಲಿಫ್ಟ್ ಅಲ್ಲಿ ಇರಲಿಲ್ಲ. ಮೃತ್ಯುವಿನ ಬಾಯೊಳಕ್ಕೇ ಕಾಲಿಟ್ಟಂತಾಗಿತ್ತು. ಒಂದು ಹೆಜ್ಜೆ ಹಿಂದಕ್ಕೆ ಸರಿಯಲೂ ಕಾಲ ಮಿಂಚಿಹೋಗಿತ್ತು! ನೀರು ತುಂಬಿದ ಮಡಕೆಯು ಕೈಜಾರಿ ಮಹಡಿಯ ಮೇಲಿಂದ ಬಿದ್ದಂತಾಗಿತ್ತು. ಕಣ್‌ರೆಪ್ಪೆ ಬಡಿಯುವುದರೊಳಗೆ ಆ ದುರ್ದೈವಿ ಮಹಿಳೆಯ ದೇಹ ನಜ್ಜುಗುಜ್ಜಾಗಿ ರಕ್ತದ ಮಡುವಿನಲ್ಲಿ ಕೆಳಗೆ ಬಿದ್ದಿತ್ತು!

ಈ ದಾರುಣ ಘಟನೆಯನ್ನು ಕೇಳಿ ನಮ್ಮೆಲ್ಲರ ಹೃದಯ ತಲ್ಲಣಗೊಂಡಿತು. ಬಾಹ್ಯಪರಿಸರದ ಅರಿವಿಲ್ಲದಂತೆ ಮೌನ ಆವರಿಸಿತು. ಆ ಮಹಿಳೆಯ ದುರಂತ ಸಾವಿಗೆ ಆಕೆಯ ನಿರ್ಲಕ್ಷ್ಯ ಕಾರಣವೇ? ಅವಳ ಅವಸರ ಕಾರಣವೇ ಏನೆನ್ನೋಣ? ಅವೆರಡೂ ಕಾರಣವಿರಬಹುದೇ? ಮಾತು ಮೌನಗೊಂಡರೂ ಮನಸ್ಸು ಆಲೋಚನೆಗಳ ಸುಳಿಯಲ್ಲಿ ಸಿಕ್ಕಿಕೊಂಡಿತು. ಜೀವನದಲ್ಲಿ ಸಂಭವಿಸುವ ಅನೇಕ ದುರ್ಘಟನೆಗಳಿಗೆ ಎಲ್ಲ ಸಂದರ್ಭಗಳಲ್ಲೂ ನಿರ್ಲಕ್ಷ್ಯವೇ ಕಾರಣವೆಂದು ಹೇಳಲಾಗುವುದಿಲ್ಲ, ಸಂಭವಿಸಬಹುದಾಗಿದ್ದ ಎಷ್ಟೋ ದುರ್ಘಟನೆಗಳಿಂದ ಕ್ಷಣಾರ್ಧದಲ್ಲಿ ಮಿಂಚಿನಂತೆ ಪಾರಾಗುವುದು ಪ್ರಜ್ಞಾಪೂರ್ವಕವಾಗಿಯೇ ಎಂದು ಹೇಳಲೂ ಬರುವುದಿಲ್ಲ. ಅವಳ ಅದೃಷ್ಟ ಚೆನ್ನಾಗಿರಲಿಲ್ಲ! ಅದಕ್ಕಾಗಿಯೇ ದುರ್ವಿಧಿಯು ಅವಳನ್ನು ಅಲ್ಲಿಗೆ ಎಳೆದುಕೊಂಡು ಹೋಗಿದೆ! ಎಂದು ಜನರು ಉದ್ಗಾರವೆಳೆಯುತ್ತಾರೆ. ಹೀಗೆ ಅದೃಷ್ಟ, ನಸೀಬ, ಹಣೆಬರಹ, ದುರ್ವಿಧಿ ಇತ್ಯಾದಿಗಳಲ್ಲಿ ನಂಬಿಕೆಯಿಲ್ಲದ ಜನರು ಇದನ್ನು ಕೇವಲ 'ಆಕಸ್ಮಿಕ' ಎನ್ನುತ್ತಾರೆ. ಅದು ಕೇವಲ ಆಕಸ್ಮಿಕವೆನ್ನುವುದು ಮೇಲ್ಕಂಡ ಘಟನೆಯು ನಡೆದುದು ಹೇಗೆ ಎಂಬುದಕ್ಕೆ ಉತ್ತರವಾಗಬಲ್ಲುದೇ ಹೊರತು ಏಕೆ ಎಂಬುದಕ್ಕೆ ಆತ್ಯಂತಿಕ ಉತ್ತರವಾಗುವುದಿಲ್ಲ. ಅದೃಷ್ಟ ಎಂಬುದಾಗಲೀ, ಹಣೆ ಬರಹ ಎಂಬುದಾಗಲೀ, ಆಕಸ್ಮಿಕ

ಎಂಬುದಾಗಲೀ ಈ ಎಲ್ಲ ಪದಗಳು ಮನುಷ್ಯನ ಬುದ್ಧಿ, ತರ್ಕ ಮತ್ತು ಆಲೋಚನೆಗಳಿಗೆ ನಿಲುಕದ ಯಾವುದೋ ಒಂದು ನಿಗೂಢ ಸ್ಥಿತಿಯನ್ನೇ ಸೂಚಿಸುತ್ತವೆ. ಕೇವಲ ಇಂತಹ ಪದಗಳನ್ನು ಬಳಸುವುದರ ಮೂಲಕ ಅದೇನೆಂಬುದಕ್ಕೆ ಉತ್ತರ ಸಿಕ್ಕಿದೆಯೆಂದು ಭಾವಿಸುವುದು ಭ್ರಮಾತ್ಮಕ ನಿಲವು. "ಬ್ರಹ್ಮ ಸತ್ಯಂ ಜಗನ್ ಮಿಥ್ಯಾ" ಎಂದು ಪ್ರತಿಪಾದಿಸಿದ ಶಂಕರಾಚಾರ್ಯರು ಮಿಥ್ಯಾ ಜಗತ್ತು ಸತ್ಯವಾಗಿ ಕಾಣಲು 'ಮಾಯೆ' ಕಾರಣ ಎನ್ನುತ್ತಾರೆ. ಆ ಮಾಯೆಯ ಸ್ವರೂಪ ಏನು ಎಂದು ಕೇಳಿದರೆ ಅದು 'ಅನಿರ್ವಚನೀಯ' ಎಂದು ವರ್ಣಿಸುತ್ತಾರೆ. ಅಂದರೆ ಅದನ್ನು ಶಬ್ದಗಳಲ್ಲಿ ವಿವರಿಸಲು ಸಾಧ್ಯವಾಗುವುದಿಲ್ಲವೆಂದರ್ಥ. 'ಮಾಯೆ'ಯನ್ನು ಅನಿರ್ವಚನೀಯ, ಹೇಳಲುಬಾರದು ಎನ್ನುವುದಕ್ಕಿಂತ ಈ ಪ್ರಪಂಚವನ್ನೇ ಬಿಡಿಸಲಾರದ ಒಗಟು, ಮನುಷ್ಯನ ಬುದ್ಧಿಗೆ ನಿಲುಕದ್ದು ಎಂದು ಏಕೆ ಒಪ್ಪಿಕೊಳ್ಳಬಾರದು? ಮನುಷ್ಯನ ಬುದ್ಧಿ, ಮನಸ್ಸು, ಇಂದ್ರಿಯಗಳು ಕಾಲ, ದೇಶಗಳ (Time and Space) ವ್ಯಾಪ್ತಿಗೆ ಒಳಪಟ್ಟವು. ಹೀಗಾಗಿ ಕಾಲಾತೀತವಾದದ್ದನ್ನು, ದೇಶಾತೀತವಾದದ್ದನ್ನು (transcending the limits of time and space) ಅವು ಗ್ರಹಿಸಲಾರವು. "ನಾಯಮಾತ್ಮಾ ಪ್ರವಚನೇನ ಲಭ್ಯಃ" (ಈ ಆತ್ಮವು ಮಾತುಗಳಿಗೆ ನಿಲುಕದ್ದು) ಎಂಬ ಕಠೋಪನಿಷತ್ತಿನ ನುಡಿಯು ತುಂಬಾ ಅರ್ಥಪೂರ್ಣವಾಗಿದೆ. ಮಾತು, ಶಬ್ದ, ಆಲೋಚನೆಗಳು, ಬುದ್ಧಿ ಮತ್ತು ಮನಸ್ಸಿನ ಆವಿಷ್ಕಾರಗಳು (products). ಆದ್ದರಿಂದ ಅವುಗಳ ವ್ಯಾಪ್ತಿಯೂ ಪರಿಸೀಮಿತವೇ. ಈ ಕಾರಣದಿಂದಲೇ ಅಕ್ಕಮಹಾದೇವಿಯು ತನ್ನ ಆಧ್ಯಾತ್ಮಿಕ ಸಾಧನೆಯ ಉತ್ತುಂಗ ಶಿಖರವನ್ನು ಮೆಟ್ಟಿ ಅನುಭಾವ ಪೂರ್ಣವಾಗಿ ನುಡಿದದ್ದು :

> **ಲಿಂಗವೆನ್ನೆ, ಲಿಂಗೈಕ್ಯವೆನ್ನೆ; ಸಂಗವೆನ್ನೆ, ನಿಸ್ಸಂಗವೆನ್ನೆ**
> **ನಾನೆನ್ನೆ, ನೀನೆನ್ನೆ; ಆಯಿತ್ತೆನ್ನೆ, ಆಗದೆನ್ನೆ**
> **ಚನ್ನಮಲ್ಲಿಕಾರ್ಜುನನಲ್ಲಿ ಘನಲಿಂಗೈಕ್ಯವಾದ ಬಳಿಕ ಮತ್ತೇನೂ ಎನ್ನೆ!"**

**24.2.2010**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑